ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಪುರಸಭೆ ಮತ್ತು ನಗರಸಭೆಗಳ ಪರಿಮಿತಿ ಪರಿಷ್ಕರಣೆ

2657 (3026) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಪುರಸಭೆ ಹಾಗೂ ನಗರಸಭೆಗಳು ಇದ್ದು, ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ ಅವುಗಳ ವ್ಯಾಪ್ತಿ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರೀತಿ ನಗರ ವಿಸ್ತಾರಗೊಂಡಾಗ ವಿಸ್ತೃತ ಪ್ರದೇಶವನ್ನು ಒಳಗೊಂಡಂತೆ ನಗರದ ವ್ಯಾಪ್ತಿಯನ್ನು ಪುನರ್ ನಿಗಧಿಪಡಿಸಲು ಏನು ಕ್ರಮ ಕೈಗೊಳ್ಳಲಾಗಿದೆ?

ಇ) ಈ ರೀತಿ ಎಷ್ಟು ಪುರಸಭೆ : ನಗರಸಭೆಗಳ ಪರಿಮಿತಿ ವಿಸ್ತರಿಸಲಾಗಿದೆ? ಇವುಗಳ ಪರಿಮಿತಿ ಎಂದು ವಿಸ್ತರಿಸಲಾಯಿತು? ಇಲ್ಲದಿದ್ದಲ್ಲಿ ಇದನ್ನು ವಿಸ್ತರಿಸಲು ಇರುವ ಅಡಚಣೆಗಳೇನು ಹಾಗೂ ಎಂದು ವಿಸ್ತರಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ಸಚಿವರು) :—

ಅ) ಹೌದು.

ಆ) ಜನಸಂಖ್ಯೆಯ ಆಧಾರದ ಮೇಲೆ ಎಲ್ಲೆ ವಿಸ್ತರಣೆಯನ್ನು ಮಾಡುವಾಗ ಜನಗಣತಿ ನಿರ್ದೇಶನಾಲಯ ಹಿಂದಿನ ಜನಗಣತಿಯಲ್ಲಿ ಪ್ರಕಟಪಡಿಸಿದ ಜನಸಂಖ್ಯೆಯನ್ನೇ ಆಧಾರವಾಗಿ ಇಟ್ಟುಕೊಂಡು ಮಾಡಬೇಕಾಗುತ್ತದೆ. ಪ್ರಸ್ತುತ 2001 ರ ಜನಗಣತಿ ಅಂಕಿ ಅಂಶಗಳು ಪ್ರಕಟವಾದ ನಂತರ ನಗರ ವ್ಯಾಪ್ತಿಯ ಪುನರ್‌ನಿಗಧೀಕರಣ ಅಗತ್ಯವಾದಲ್ಲಿ ಈ ಬಗ್ಗೆ ಜಿಲ್ಲಾಧಿಕಾರಿಗಳಿಂದ ವರದಿ ಬಂದ ನಂತರ ಕರ್ನಾಟಕ ಪುರಸಭೆಗಳ ಅಧಿನಿಯಮ ಪರಿಚ್ಛೇದ-3 ಮತ್ತು 4 ರನ್ವಯ ಎಲ್ಲೆ ವಿಸ್ತರಣೆ ಮಾಡಲು ಅವಕಾಶವಾಗುತ್ತಿದೆ.

ಈಗಾಗಲೇ ಜನಗಣತಿ ನಿರ್ದೇಶನಾಲಯದಿಂದ ಪ್ರಕಟವಾಗಿರುವ 1991ರ ಜನಗಣತಿ ಅಂಕಿಅಂಶಗಳ ಆಧಾರದ ಮೇಲೆ ಸಂವಿಧಾನದ 74 ತಿದ್ದುಪಡಿ ಅನ್ವಯ ನಗರ ಸ್ಥಳೀಯ ಸಂಸ್ಥೆಗಳ ಗಡಿಗಳನ್ನು ನಿರ್ದಿಷ್ಟಪಡಿಸಲಾಗಿದೆ. ಇದರನ್ವಯ 40 ನಗರಸಬೆ ಹಾಗೂ 82 ಪುರಸಭೆಗಳ ಪರಿಮಿತಿಯನ್ನು ನಿರ್ದಿಷ್ಟಪಡಿಸಲಾಗಿದೆ. 2001 ಜನಗಣತಿ ಸಮೀಕ್ಷೆ ಅಂಕಿ ಅಂಶಗಳು ಪ್ರಕಟವಾದ ನಂತರ ಅಗತ್ಯವಿದ್ದಲ್ಲಿ ಜಿಲ್ಲಾಧಿಕಾರಿಗಳ ವರದಿಯನ್ನು ಪರಿಗಣಿಸಿ ನಗರಸ್ಥಳೀಯ. ಸಂಸ್ಥೆಗಳ ಎಲ್ಲೆಯ ಪುನರ್ ನಿಗಧೀಕರಣ ಮಾಡಲಾಗುವುದು.